**ದಿನಾಂಕಃ 24.05.2023**
**ಸ್ಪೆಷಲ್ ಕೇಸ್ ನಂ. 54/2019**
**ಪ್ರಾಸಾಃ 2**

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀಸವಾಲು ಆರೋಪಿ ಪರ ಶ್ರೀ ಎ.ಜಿ.ಜಿ., ವಕೀಲರಿಂದಃ-**

ನನ್ನ ತಂದೆಯ ಹೆಸರು ಶಿವ, ಅವರು ಕಲ್ಲು ಕೆಲಸ ಮಾಡುತ್ತಾರೆ. ನನ್ನ ದೊಡ್ಡಪ್ಪನ ಹೆಸರು ಧರ್ಮ. ಅವರು ಪ್ರಾಸಾ-1 ರವರ ತಂದೆ. ಅದೇ ರೀತಿ ನನ್ನ ಇನ್ನೊಂದು ದೊಡ್ಡಪ್ಪನ ಹೆಸರು ವಿಯಜ್, ಅವರ ಮಗನ ಹೆಸರು ದರ್ಶನ್. ನಾವು ಬೋವಿ ಜನಾಂಗಕ್ಕೆ ಸೇರಿದ್ದು, ಕಲ್ಲುವಡ್ಡರಾಗಿರುತ್ತೇವೆ. ನನ್ನ ಜೊತೆ ಸ್ಕೂಟಿ ಇದೆ. ನನಗೆ ಆರೋಪಿ ಕಳೆದ 10 ವರ್ಷಗಳಿಂದ ಪರಿಚಯ ಇದೆ. ನನ್ನ ಮನೆಯಿಂದ ಆರೋಪಿಯ ಮನೆಗೆ 200 ರಿಂದ 250 ಮೀಟರ್ ದೂರ ಇದೆ. ನನ್ನ ಮನೆಯಿಂದ ಪ್ರಾಸಾ-1 ರವರ ಮನೆಗೆ 2 ನಿಮಿಷದ ದಾರಿ. ಪ್ರಾಸಾ-1 ರವರು ಈ ವರ್ಷದಿಂದ ಕಾಂಗ್ರೇಸ್ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದಾರೆ. ದೇವಿಪ್ರಸಾದ್ ಹಾಗೂ ಪ್ರಾಸಾ-1 ರವರು ಸ್ನೇಹಿತರು ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಮೊಬೈಲ್ ನಂ. 7259259185 ಅಂದರೆ ಸರಿ. ಈ ಘಟನೆ ಆಗುವ ಮೊದಲು ನಾನು ಆರೋಪಿಯ ಕೈಯಿಂದ ರೂ. 16,000/- ಸಾಲ ತೆಗೆದುಕೊಂಡಿದ್ದೆ ಅಂದರೆ ಸರಿಯಲ್ಲ. ಅದನ್ನು ನಾನು ದಿನಾಂಕಃ19.04.2022 ರಂದು ನನ್ನ ಖಾತೆಯಿಂದ ಆರೋಪಿ ಖಾತೆಗೆ ನಾನು ಗೂಗಲ್ ಪೇ ಮುಖಾಂತರ ಸದರಿ ಹಣವನ್ನು ಪಾವತಿ ಮಾಡಿದ್ದೇನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ರಾಮನವಮಿ ಕಾರ್ಯಕ್ರಮಕ್ಕೆ ಚಿಕ್ಕಮಗಳೂರಿನಿಂದ ಬ್ಯಾಂಡ್ ಸೆಟ್ ತರಿಸುವ ಸಲುವಾಗಿ ಮುಂಗಡ ಹಣ ನೀಡಲು ಸದರಿ ಹಣವನ್ನು ನಾನು ಆರೋಪಿಯ ಖಾತೆಗೆ ಹಾಕಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಭರತ್ ಎಂಬುವವರು ಆರೋಪಿಯ ಖಾತೆಗೆ ಹಣ ಹಾಕಲು ಹೇಳಿದ ಕಾರಣ ನಾನು ಆರೋಪಿಯ ಖಾತೆಗೆ ಹಣ ಹಾಕಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಈ ಮೇಲೆ ಹೇಳಿದ ವಿಚಾರಗಳು ನಾನು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಮತ್ತು ಗಲಾಟೆ ಆಗುವ ಮೊದಲು ನಾನು ಆರೋಪಿಯ ಕೈಯಿಂದ ಕೈ

ಸಾಲ ಪಡೆದುಕೊಂಡಿದ್ದೆ ಅಂದರೆ ಸರಿಯಲ್ಲ. ನಾನು ಆ ದಿನ ಸ್ಥಳದಲ್ಲಿ ಇದ್ದಿರಲಿಲ್ಲ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳಲು ತೊಂದರೆ ಆಗುತ್ತದೆ ಎಂಬ ಕಾರಣಕ್ಕೆ ನಾನು ಸದರಿ ಹಣವನ್ನು ಪಾವತಿ ಮಾಡಿದ್ದೆ ಅಂದರೆ ಸರಿಯಲ್ಲ. ಆರೋಪಿ ದೇವಿಪ್ರಸಾದ್ ವಿರುದ್ದ ಪಂಚಾಯತ್ ಚುನಾವಣೆಯಲ್ಲಿ ಸೋತಿದ್ದಾರೆ ಅಂದರೆ ಸರಿ. ಈ ಘಟನೆ ಆಗುವ ಸಂದರ್ಭದಲ್ಲಿ ಆರೋಪಿ ದೇವಿಪ್ರಸಾದ್ ವಿರುದ್ದ ಸೋತು ದೇವಿಪ್ರಸಾದ್ ಪಂಚಾಯತಿಯಲ್ಲಿ ಸದಸ್ಯರಾಗಿದ್ದರು ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿಗು ಹಾಗೂ ಪ್ರಾಸಾ-1 ರವರಿಗೆ ರಾಜಕೀಯ ವೈಮನಸ್ಸು ಇತ್ತು ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ದೇವಿಪ್ರಸಾದ್ ಚುನಾವಣೆಗೆ ನಿಂತಿದ್ದಾಗ ಪ್ರಾಸಾ-1 ಅವರ ಜೊತೆ ಚುನಾವಣಾ ಪ್ರಚಾರ ಮಾಡುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಕಕ್ಕೆ ಹೊಳೆಯ ಬಳಿ ನಾನು ಹಾಗೂ ಪ್ರಾಸಾ-1 ಇದ್ದೆವು. ಕಕ್ಕೆ ಹೊಳೆಯ ಬಳಿ ನಾನು ಹಾಗೂ ಪ್ರಾಸಾ-1 ರವರು ಮಾತನಾಡುವ ಸಂದರ್ಭದಲ್ಲಿ ನಾನು ಚಿಕನ್ ತೆಗೆದುಕೊಂಡಿದ್ದೆನು. ನಾನು ಹಾಗೂ ಪ್ರಾಸಾ-1 ರವರು ಜೊತೆಯಲ್ಲೇ ಚಿಕನ್ ತೆಗೆದುಕೊಂಡೆವು, ಯಾರ ಅಂಗಡಿ ಎಂದು ನನಗೆ ಗೊತ್ತಿಲ್ಲ. ಚಿಕನ್ ಅಂಗಡಿಯಿಂದ ಕಕ್ಕೆ ಹೊಳೆಯ ನಾವು ಮಾತನಾಡಿಕೊಂಡಿದ್ದ ಸ್ಥಳಕ್ಕೆ ಸುಮಾರು 300 ಮೀಟರ್ ಇರಬಹುದು. ನಾನು ಎಸ್.ಎಸ್.ಎಲ್.ಸಿ., ವರೆಗೆ ಓದಿದ್ದೇನೆ. ನಾವು ನಿಂತಿದ್ದ ಸ್ಥಳದಿಂದ ರಸ್ತೆಯ ಎದುರುಗಡೆ ಪೆಟ್ರೋಲ್ ಬಂಕ್ ಇದೆ. ನಾನು ನಿಂತ ಜಾಗದಿಂದ ರಸ್ತೆ ದಾಟಿ ಪೆಟ್ರೋಲ್ ಬಂಕ್ ಗೆ ಹೋಗಬೇಕಾಗುತ್ತದೆ ಅಂದರೆ ಸರಿ. ಸದರಿ ರಸ್ತೆ ಮಡಿಕೇರಿ ಸೋಮವಾರಪೇಟೆ ರಸ್ತೆ. ಆರೋಪಿ ಕಾನ್ವೆಂಟ್ ಬಾಣೆ ಕಡೆಯಿಂದ ಬಂದು, ನಮ್ಮನ್ನು ದಾಟಿ, ಪೆಟ್ರೋಲ್ ಬಂಕ್ ಕಡೆ ಹೋಗಿ ಅಲ್ಲಿ ಗಾಡಿ ತಿರುಗಿಸಿ, ಪುನಃ ಬಂದು ನಮಗೆ ಬೈದು ಹೋದರು. ನಾವು ನಿಂತ ಜಾಗದಿಂದ ಕಾರಿನಲ್ಲಿ ಆರೋಪಿ ಕುಳಿತಿದ್ದ ಜಾಗಕ್ಕೆ ಸುಮಾರು 5 ಅಡಿ ಅಂತರ ಇರಬಹುದು. ಸದರಿ ರಸ್ತೆ ಮುಖ್ಯ ರಸ್ತೆ, ಅಲ್ಲಿ ವಾಹನಗಳು ಹೆಚ್ಚಾಗಿ ಓಡಾಡುತ್ತವೆ ಅಂದರೆ ಸರಿ. ವಾಹನಗಳ ಶಬ್ದದಲ್ಲಿ ಮಾತನಾಡುವುದು ಕೇಳಿಸುವುದು ಕಷ್ಟ ಅಂದರೆ ಸರಿಯಲ್ಲ. ತುಂಬಾ ವಾಹನಗಳು ಓಡಾಡುತ್ತಿರುವಾಗ ವಾಹನವನ್ನು ತಿರುಗಿಸಿ ಪುನಃ ಬರಲು ಕಷ್ಟ ಅಂದರೆ

ಅಲ್ಲಿ ಅಷ್ಟೊಂದು ವಾಹನಗಳು ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಕಕ್ಕೆ ಹೊಳೆಯಿಂದ ಕಾನ್ವೆಂಟ್ ಬಾಣೆಗೆ ಅರ್ಧ ಕಿ.ಮೀ. ದೂರ ಇರಬಹುದು. ಆರೋಪಿಯ ಮನೆ ಅಲ್ಲೆ ಅಕ್ಕಪಕ್ಕದಲ್ಲಿ ಇದೆ. ಆರೋಪಿ ಕಾರಿನಲ್ಲಿ ಬಂದು ನನಗೆ ಹಾಗೂ ಪ್ರಾಸಾ-1 ರವರಿಗೆ ಬೈದದ್ದು ಸುಳ್ಳು ಅಂದರೆ ಸರಿಯಲ್ಲ. ಕಕ್ಕೆ ಹೊಳೆಯ ಪಕ್ಕದಲ್ಲಿ ಪೊಲೀಸ್ ಠಾಣೆ ಇದೆ ಅಂದರೆ ಸಾಕ್ಷಿ 400 ಮೀಟರ್ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ಆರೋಪಿ ನಮಗೆ ಬೈದ ಸಂದರ್ಭದಲ್ಲಿ ನಾನು ಹಾಗೂ ಪ್ರಾಸಾ-1 ರವರು ಮಾತನಾಡಿಕೊಂಡು ಆರೋಪಿಯ ವಿರುದ್ದ ದೂರು ನೀಡುವ ಪ್ರಯತ್ನ ಮಾಡಿಲ್ಲ. ಅಲ್ಲಿ ಯಾವುದೇ ಘಟನೆ ಆಗದಿದ್ದ ಕಾರಣ ಹಾಗೂ ಅಲ್ಲಿ ಎದುರು ಇದ್ದ ಪೆಟ್ರೋಲ್ ಬಂಕ್ ನಲ್ಲಿ ಸಿ.ಸಿ., ಕ್ಯಾಮಾರಾ ಇದ್ದ ಕಾರಣ ನಾನು ದೂರು ನೀಡಿದರೆ ಸತ್ಯ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ನಾನು ದೂರು ನೀಡುವ ಪ್ರಯತ್ನ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿ ನಮಗೆ ಬೈದಿದ್ದಾರೆ ಎಂದು ಹೇಳಲಾದ ಸಮಯದಿಂದ 5 ರಿಂದ 10 ನಿಮಿಷದವರೆಗೆ ನಾವು ಅಲ್ಲಿ ಇದ್ದೆವು. ಸಾಕ್ಷಿಯು ಮುಂದುವರೆದು ನಾವು ಅಲ್ಲಿ ಸ್ವಲ್ಪ ಜಾಸ್ತಿ ಹೊತ್ತು ಅಂದರೆ ಮುಕ್ಕಾಲು ಗಂಟೆ ಇದ್ದೆವು ಎಂದು ನುಡಿಯುತ್ತಾರೆ. ಕಕ್ಕೆ ಹೊಳೆಯಿಂದ ಕಾನ್ವೆಂಟ್ ಬಾಣೆಗೆ 5 ರಿಂದ 10 ನಿಮಿಷದ ದಾರಿ. ಚಾಸಾ-3 ಆ ಬಳಿಕ ಎಲ್ಲಿಗೆ ಹೋದರು ಎಂದು ನನಗೆ ಗೊತ್ತಿಲ್ಲ. ಮನೆಗೆ ಹೋಗಿ ಚಿಕನ್ ನೀಡಿ ಪುನಃ ಪ್ರಾಸಾ-1 ರವರ ಜೊತೆ ಹೋಗಲು ತೊಂದರೆ ಇತ್ತಾ ಅಂದರೆ ನಾನು ನನ್ನ ದೊಡ್ಡಪ್ಪನ ಜೊತೆ ಮಾತನಾಡಿಕೊಂಡು ಅಲ್ಲೇ ಇದ್ದೆ ಆ ಕಾರಣದಿಂದ ನನಗೆ ಹೋಗಲು ಆಗಿಲ್ಲ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪನ ಜೊತೆ 5 ರಿಂದ 10 ನಿಮಿಷಗಳ ಕಾಲ ಮಾತನಾಡಿರುತ್ತೇನೆ. ಕೆಎ-12-ಎಸ್-0608 ರ ಸ್ಕೂಟಿಯಲ್ಲಿ ನಾನು ಚಾಸಾ-5 ರವರ ಅಂಗಡಿಗೆ ಹೋಗಿದ್ದೆ. ನಾನು ಅಂಗಡಿಗೆ ಹೋದ ಸಂದರ್ಭದಲ್ಲಿ ಪ್ರಾಸಾ-1 ರವರು ಮಾತ್ರ ಇದ್ದರು. ನಾನು ಹೋದ ನಂತರ ಪ್ರಾಸಾ-1 ಆರೋಪಿಗೆ ಫೋನ್ ಮಾಡಿ ಕರೆಸಿದ್ದರು. 5 ನಿಮಿಷಗಳಲ್ಲಿ ಆರೋಪಿ ಅಲ್ಲಿಗೆ ಬಂದಿದ್ದರು. ನಾನು ಚಾಸಾ-5 ರವರ ಅಂಗಡಿಗೆ ತಲುಪಿದಾಗ 7.30 ಗಂಟೆ ಆಗಿತ್ತು. ಪ್ರಾಸಾ-1 ರವರು ಆರೋಪಿಗೆ ಫೋನ್ ಮಾಡುವ ಸಂದರ್ಭದಲ್ಲಿ ಸುಮಾರು 7.30 ಗಂಟೆ ಆಗಿತ್ತು. ಪ್ರಾಸಾ-1 ರವರು

ಆರೋಪಿಗೆ ಫೋನ್ ಮಾಡದಿದ್ದರೆ ಆರೋಪಿ ಅಲ್ಲಿಗೆ ಬರುತ್ತಿರಲಿಲ್ಲ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ರಾಜಣ್ಣನವರ ಅಂಗಡಿಯಿಂದ ಲೈಟ್ ಕಂಬ ಯಾವ ದಿಕ್ಕಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ರಾಜಣ್ಣನ ಅಂಗಡಿಯಿಂದ ರಸ್ತೆ ಕಳೆದ ಲೈಟ್ ಕಂಬ ಇದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರಾಜಣ್ಣನ ಅಂಗಡಿಯ ಪಕ್ಕದಲ್ಲಿ ಲೈಟ್ ಕಂಬ ಇದೆ ಎಂದು ನುಡಿಯುತ್ತಾರೆ. ರಾಜಣ್ಣನ ಅಂಗಡಿಯಿಂದ 10 ಅಡಿ ದೂರದಲ್ಲಿ ಲೈಟ್ ಕಂಬ ಇದೆ. ರಾಜಣ್ಣನ ಅಂಗಡಿಯ ಹಿಂಭಾಗಕ್ಕೆ ಅಂಗಡಿಯ ಎದುರಿನಿಂದ 5 ಅಡಿ ದೂರ ಇರಬಹುದು. ಲೈಟ್ ಕಂಬಕ್ಕು ಹಾಗೂ ರಾಜಣ್ಣನ ಅಂಗಡಿಯ ಹಿಂಭಾಗಕ್ಕೆ ಸುಮಾರು 20 ಅಡಿ ದೂರ ಇರಬಹುದು. ನಾನು ಅಲ್ಲಿಗೆ ಹೋಗಿ 5 ನಿಮಿಷಗಳ ನಂತರ ಆರೋಪಿ ಅಲ್ಲಿಗೆ ಬಂದರು. ಆರೋಪಿ ಬರುವಾಗ ಕಾರಿನಲ್ಲಿ ಒಬ್ಬರೇ ಬಂದರು. ಆರೋಪಿ ಮತ್ತು ಪ್ರಾಸಾ-1 ರವರು ರಾಜಣ್ಣನ ಅಂಗಡಿಯ ಎದುರಿನಲ್ಲಿ ಮೊದಲು ಮಾತು ಶುರು ಮಾಡಿ ಆ ನಂತರ ಅಂಗಡಿಯ ಹಿಂಭಾಗಕ್ಕೆ ಬಂದರು. ಆ ಸಂದರ್ಭದಲ್ಲಿ ಪ್ರಾಸಾ-1 ರವರ ಕೈಯಲ್ಲಿ ಏನು ಇರಲಿಲ್ಲ. ಆ ಸಂದರ್ಭದಲ್ಲಿ ಆರೋಪಿಯ ಕೈಯಲ್ಲಿ ಯಾವುದೇ ಆಯುಧಗಳು ಇರಲಿಲ್ಲ. ಅಲ್ಲಿ ಮಾತನಾಡಿ ಮುಗಿದ ನಂತರ ಆರೋಪಿ ಕಾರು ಹತ್ತಿದರು ಅಂದರೆ ಸರಿ. ಆ ನಂತರ ಪ್ರಾಸಾ-1 ರವರು ಅವರ ಸ್ನೇಹಿತರುಗಳಿಗೆ ಹೇಳಿ ಆರೋಪಿಯನ್ನು ಹೊಡೆಯಲು ಹೊಂಚು ಹಾಕಿದ್ದರು ಅಂದರೆ ಸರಿಯಲ್ಲ. ಆರೋಪಿಗೆ ತೋಟ ಇರುವುದರಿಂದ ಅವರು ಕೋವಿಯನ್ನು ಅವರ ಕಾರಿನಲ್ಲಿ ಇಟ್ಟುಕೊಳ್ಳುತ್ತಾರೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ರಾತ್ರಿ 7.30 ಗಂಟೆಗೆ ಕತ್ತಲಾಗುತ್ತದೆ ಬೆಳಕಿರುವುದಿಲ್ಲ ಅಂದರೆ ಸಾಕ್ಷಿ ಅಲ್ಲಿ ಲೈಟ್ ಕಂಬ ಇದ್ದ ಕಾರಣ ಅಲ್ಲಿ ಬೆಳಕಿತ್ತು ಎಂದು ನುಡಿಯುತ್ತಾರೆ. ಕಾರಿನ ಒಳಗೆ ಆರೋಪಿ ಕುಳಿತಿದ್ದಾಗ ಪ್ರಾಸಾ-1 ರವರು ಹಲ್ಲೆ ಮಾಡುವ ಮೊದಲು ಆರೋಪಿಯ ಕೋವಿ ಕಿತ್ತುಕೊಂಡರೆ ತಾನು ಸುರಕ್ಷಿತ ಎಂಬ ಭಾವನೆಯಿಂದ ಆರೋಪಿಯ ಕೋವಿಯನ್ನು ಪ್ರಾಸಾ-1 ರವರು ಕಿತ್ತುಕೊಂಡರು ಅಂದರೆ ಸರಿಯಲ್ಲ. ಪ್ರಾಸಾ-1 ರವರು ಕೋವಿಯನ್ನು ಕಿತ್ತುಕೊಳ್ಳುವ ಸಂದರ್ಭದಲ್ಲಿ ಅದು ಮಿಸ್ ಫಯರ್ ಆಗಿ ಅದು ಪ್ರಾಸಾ-1 ರವರ ಎದೆಗೆ ತಾಗಿತ್ತು ಅಂದರೆ

ಸರಿಯಲ್ಲ. ಆರೋಪಿ ಉದ್ದೇಶಪೂರ್ವಕವಾಗಿ ಪ್ರಾಸಾ-1 ರವರಿಗೆ ಬೈಯುವುದಾಗಲಿ, ಕೋವಿಯಿಂದ ಗುಂಡು ಹೊಡೆಯುವುದಾಗಲಿ ಮಾಡಿಲ್ಲ ಅಂದರೆ ಸರಿಯಲ್ಲ.

ನಾನು ಆ ದಿನ ಆಸ್ಪತ್ರೆಗೆ ಹೋಗಿದ್ದೇನೆ. ಯಾರ ಆಟೋದಲ್ಲಿ ಆ ದಿನ ಪ್ರಾಸಾ-1 ರವರು ಆಸ್ಪತ್ರೆಗೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರಾಸಾ-1 ರವರ ಜೊತೆ ಮಣಿಕಂಠ ಒಬ್ಬರೇ ಆಟೋದಲ್ಲಿ ಹೋದರು. ನಾನು ಸ್ಕೂಟಿಯಲ್ಲಿ ಅವರನ್ನು ಹಿಂಬಾಲಿಸಿದೆ. ಕಾನ್ವೆಂಟ್ ಬಾಣೆಯಿಂದ ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆ ಹತ್ತಿರದಲ್ಲಿ ಇದೆ. ನಾನು ಪ್ರಾಸಾ-1 ರವರನ್ನು ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ನಾವು ಆ ಬಳಿಕ ಆಂಬ್ಯುಲೆನ್ಸ್ ನಲ್ಲಿ ಮಡಿಕೇರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಸುಬ್ರಮಣಿ ಜೊತೆ ಹೋದೆನು. ಪ್ರಾಸಾ-1 ಆ ದಿನ ಬಿಳಿ ಟೀ ಶರ್ಟ್ ಮತ್ತು ಲೆದರ್ ಜಾಕೆಟ್ ಹಾಕಿದ್ದರು. ಪ್ರಾಸಾ-1 ರವರಿಗೆ ಗಾಯ ಆಗಿದ್ದನ್ನು ನಾನು ನೋಡಿರುತ್ತೇನೆ. ಅಲ್ಲಿ ಒಂದೇ ಹೋಲ್ ಆಗಿತ್ತು, ಆಸ್ಪತ್ರೆಯಲ್ಲಿ ಚಿಲ್ಲುಗಳನ್ನು ತೆಗೆಯುವ ಸಂದರ್ಭದಲ್ಲಿ ಗಾಯವನ್ನು ದೊಡ್ಡ ಮಾಡಿ ತೆಗೆದಿದ್ದರು. ಪ್ರಾಸಾ-1 ರವರ ಜಾಕೆಟ್ ನ ಎಡ ಭಾಗದಲ್ಲಿ ಒಂದು ತೂತು ಆಗಿತ್ತು. ತೂತಿನ ಅಗಲ ಎಷ್ಟು ಎಂದು ನನಗೆ ಹೇಳಲು ಆಗುವುದಿಲ್ಲ. ಜಾಕೆಟ್ ನ ಎದೆಯ ಭಾಗದಲ್ಲಿ ಯಾವುದೇ ತೂತು ಇಲ್ಲಾ ಅಂದರೆ ಸರಿಯಲ್ಲ. ಪ್ರಾಸಾ-1 ರವರು ನನ್ನ ಅಣ್ಣನಾದ ಕಾರಣ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ, ಆ ಕಾರಣದಿಂದ ಈ ಪ್ರಕರಣದ ಯಾವುದೇ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಆರೋಪಿ ಕೋವಿಯನ್ನು ಕಿತ್ತುಕೊಳ್ಳುವ ಸಂದರ್ಭದಲ್ಲಿ ಕೋವಿಯಿಂದ ಗುಂಡು ಮಿಸ್ ಫಯರ್ ಆದ ವಿಷಯ ನನಗೆ ಗೊತ್ತಿದೆ ಅಂದರೆ ಸರಿಯಲ್ಲ. ಪ್ರಾಸಾ-1 ರವರ ಜೊತೆ ಹಲ್ಲೆ ಮಾಡಲು ಹೋದ ಹುಡುಗರಿಂದ ಈ ವಿಷಯವನ್ನು ನಾನು ತಿಳಿದುಕೊಂಡಿದ್ದೇನೆ ಅಂದರೆ ಅಲ್ಲಿ ಯಾವುದೇ ಹುಡುಗರು ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.